Implementation of Bangalore Committee Report

295 SRI M.S. ATHMANANDA (Mandya)—Will the Chief Minister be pleased to State.—

(a) whether the Bangarappa Committee has submitted its interim report on relief to farmers ;

(b) If so, what action has been taken by the Government to implement the above report ?

SRI R. GUNDU RAO (Chief Minister).—

(a) Yes.

(b) After a thorough study of the Report and the recommendations made therein, keeping in view the financial position of the State, such of the recommendations as are feasible for implementation, have been accepted for implementation by issue of suitable orders.

ಶ್ರೀ ಎಂ.ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ''ವರದಿಯನ್ನು ಪೂರ್ಣ ಅಧ್ಯಯನ ಮಾಡಿದ ನಂತರ.....ಶಿಫರಸ್ಸುಗಳನ್ನು ಜಾರಿಗೆ ತರಲಾಗುವುದೆಂದು'' ಮಾನ್ಯ ಮುಖ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ. ಹಾಗಾದರೆ ಸರ್ಕಾರ ಇನ್ನೂ ವರದಿಯನ್ನು ಪೂರ್ಣವಾಗಿ ಅಧ್ಯಯನ ಮಾಡಿಲ್ಲವೆ ? ಒಂದು ವೇಳೆ ಮಾಡಿಲ್ಲದಿದ್ದರೆ ಅಧ್ಯಯನಕ್ಕೆ ಇನ್ನೆಷ್ಟು ಕಾಲ ತೆಗೆದುಕೊಳ್ಳುವರೆಂದು ತಿಳಿಸುವರೆ ?

ಶ್ರೀ ಆರ್. ಗುಂಡೂರಾವ್.—ಸರ್ಕಾರ ವರದಿಯನ್ನು ಅಧ್ಯಯನ ಮಾಡಿದೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಯಾವುವು ಬಹಳ ಅವಸರವಾಗಿ ಕೊಡಬೇಕೆಂಬುದನ್ನು ನೋಡಿಕೊಂಡು ಅವುಗಳನ್ನು ಜಾರಿಗೆ ಕೊಟ್ಟಿದ್ದೇವೆ. ನಿಧಾನವಾಗಿ ಕೊಡಬೇಕಾದವುಗಳ ಬಗ್ಗೆ ವಿಚಾರ ಮಾಡಿ, ಹಣ ಕಾಸಿನ ಪರಿಸ್ಥಿತಿ ಉತ್ತಮವಾದ ಮೇಲೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ.—ರೈತನು ಬೆಳೆದ ವಿವಿಧ ಬೆಳೆಗಳಿಗೆ ಸೂಕ್ತವಾದ ಬೆಂಬಲ ಬೆಲೆ ಯನ್ನು ಕೊಡಬೇಕೆಂದು ತಾತ್ಕಾಲಿಕ ವರದಿಯಲ್ಲಿ ಶಿಪಾರಸ್ಸು ಮಾಡಲಾಗಿತ್ತು. ಆ ಬಗ್ಗೆ ಸರ್ಕಾರದ ಏನು ಕ್ರಮ ಕೈಗೊಂಡಿದೆ ಎಂದು ತಿಳಿಸುವಿರಾ ?

ಶ್ರೀ ಆರ್. ಗುಂಡೂರಾವ್.—ವರದಿಯಲ್ಲಿ ಶಿಫಾರಸ್ಸು ಮಾಡಿದ್ದ ಪ್ರಕಾರದಲ್ಲಿ ಕೊಡುವುದಕ್ಕಾ ಗುವುದಿಲ್ಲ ಆದರೆ, ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅವಸರವಾಗಿ ಕೊಡಬೇಕಾದಂಥವು ಗಳನ್ನು ಕೊಡುತ್ತಿದ್ದೇವೆ.

ಶ್ರೀ ಕೆ. ರಾಮಭಟ್.—ಬಂಗಾರಪ್ಪ ಸಮಿತಿಯ ಅಂತಿಮ ವರದಿ ಸರ್ಕಾರಕ್ಕೆ ಬಂದಿದ್ದರೆ ಯಾವಾಗ ಬಂತು.

ಶ್ರೀ ಆರ್. ಗುಂಡೂರಾವ್.—ಸಮಿತಿಯೇ ಇಲ್ಲದಿರುವಾಗ ಅಂತಿಮ ವರದಿ ಪ ಶ್ನೆ ಬರುವುದಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಬಂಗಾರಪ್ಪ ಸಮಿತಿಯ ತಾತ್ಕಾಲಿಕ ವರದಿಯನ್ನು ಈ ಮನೆಯಲ್ಲಿ ಪ್ರಕಟಪಡಿಸುವಾಗ್ಗೆ ನಾವು ಕೆಲವು ಪ್ರಶ್ನೆಗಳನ್ನು ಕೇಳಿದ್ದೆವು. ಏನೆಂದರೆ, ಈ ಸಮಿತಿಯ ಶಿಫಾರಸ್ಸು ಗಳನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ಕೊಡುತ್ತೀರೋ ಅಥವಾ ಇಲ್ಲವೋ ಎಂದು. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದು ನನಗೆ ನೆನಪು ಇದೆ. When a Cabinet Minister has submitted a report, you can take it for granted that we are going to accept it. ಆದ್ದರಿಂದ ಈ ವರದಿ ಬಂದು ಚರ್ಚೆಗಳು ನಡೆದ ಮೇಲೆ, ಸರ್ಕಾರದ ಪರವಾಗಿ

ಕೆಲವೊಂದು ವಿಷಯಗಳನ್ನು ಖಡಾಖಂಡಿತವಾಗಿ ಮಾಡುತ್ತೇವೆಂದು ಜನಗಳಲ್ಲಿ ಆಸೆಯನ್ನು ಹುಟ್ಟಿಸಿದಿರಿ. ಭರವಸೆಯನ್ನು ಕೊಟ್ಟಿರಿ. ಬಹಳ ಪ್ರಾಮುಖ್ಯವಾಗಿ ಸಣ್ಣ ಮತ್ತು ಮಧ್ಯಮ ರೈತರುಗಳಿಂದ ಬರತಕ್ಕ ಸಾಲ ಏನಿದೆ ಅದನ್ನು ಸಂಪೂರ್ಣವಾಗಿ ರದ್ದು ಮಾಡಿದ್ದೇವೆಂದು ಪತ್ರಿಕೆಗಳಿಗೆ ಜಾಹಿರಾತು ಕೂಡ ಕೊಟ್ಟಿರಿ. ಆದರೆ, ಕಾರ್ಯತಃ ಏನೂ ಆಗಿಲ್ಲ ನಾವು ಇಲ್ಲಿ ಪದೇ ಪದೇ ಕೇಳಿದಾಗ, ಪರಿಶೀಲನೆ ಮಾಡೋಣವೆಂದು ಹೇಳಿದ್ದಿರಿ. ಆದ್ದರಿಂದ ಸರ್ಕಾರ ಕೊಟ್ಟಂತ ಭರವಸೆಯನ್ನಾದರೂ ಉಳಿಸಿ ಕೊಳ್ಳುವುದಕ್ಕಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಸರ್ಕಾರ ಯಾವ ಯಾವ ಭರವಸೆ ಕೊಟ್ಟಿತ್ತು ಅದನ್ನು ಮಾಡಿದೆ ಆದರ ಬಗ್ಗೆ ಅನುಮಾನ ಬೇಕಿಲ್ಲ. ಯಾವುಯಾವುದನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲ ಆದನ್ನು ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ಕೆ. ಪ್ರಭಾಕರ್ — ಕೆಲವೊಂದು ಜಾರಿಗೆ ಕೊಟ್ಟಿದ್ದೇವೆಂದು ಹೇಳಿದಿರಿ ? ಯಾವು ಯಾವುದು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ವಿವರಗಳು ನನ್ನ ಹತ್ತಿರ ಇಲ್ಲ. ಬೇಕಾದರೆ ಒದಗಿಸಿಕೊಡುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—೧೯೮೧–೮೨ರ ಹಣಕಾಸಿನ ಪರಿಸ್ಥಿತಿಯನ್ನು ಲೆಕ್ಕಹಾಕಿಕೊಂಡು ಯಾವ ಯಾವ ಶಿಪಾರಸ್ಸುಗಳನ್ನು ಜಾರಿಗೆ ತರುತ್ತೀರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಅದನ್ನೇ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಂತೆ ಮಾಡಲಾಗಿ ದೆಯೆಂದು ಹೇಳಿದರು. ನಾವುಗಳು ಭರವಸೆ ಕೊಟ್ಟ ಪ್ರಕಾರ ಮಾಡಿಲ್ಲ ಎನ್ನುವುದನ್ನು ಒಂದು ರಿಪೋರ್ಟ್ ತಯಾರು ಮಾಡಿ ? ಸರ್ಕಾರಕ್ಕೆ ಬರೆದಿದ್ದೇವೆ. ಉತ್ತರ ಕೂಡ ಬಂದಿದೆ. ಏನ ಭರವಸೆ ಕೊಟ್ಟಿದ್ದಿರಿ ಅವುಗಳನ್ನು ಪರಿಶೀಲನೆ ಮಾಡಿ ಯಾವುದನ್ನು ಮಾಡಿಲ್ಲ ಅವುಗಳನ್ನು ಆದಷ್ಟು ಜಾಗ್ರತೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ.ವಿ. ರಾಜಶೇಖರನ್.—ಸ್ವಾಮಿ, ಬಂಗಾರಪ್ಪ ಸಮಿತಿಯಲ್ಲಿ ನಾನು ಕೂಡ ಸದಸ್ಯನಾಗಿದ್ದೆ ಸಮಿತಿಯು ಸರ್ಕಾರಕ್ಕೆ ಏನೇನು ಶಿಪಾರಸ್ಸು ಮಾಡುತ್ತೋ ಅವೆಲ್ಲನ್ನೂ ಒಪ್ಪಿಕೊಂಡು ಜಾರಿಗೆ ಕೊಡುತ್ತೇವೆಂದು ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿದ್ದರು. ಈಗ ಮಾನ್ಯ ಸ್ನೇಹಿತರಾದ ಪ್ರಭಾಕರ್ ರವರು ಯಾವ ಯಾವ ಶಿಪಾರಸ್ಸುಗಳನ್ನು ಜಾರಿಗೆ ಕೊಟ್ಟಿದ್ದೀರೆಂದು ಕೇಳಿದಕ್ಕೆ ನೇರವಾಗಿ ಉತ್ತರ ಕೊಡಲಿಲ್ಲ. ನಾವುಗಳು ಸಾಕಷ್ಟು ಸಲ ರೈತರುಗಳಿಗೆ ಏನು ಆಗಬೇಕಾಗಿತ್ತೋ ಅದು ಕಾರ್ಯತಃ ನೋಡುವುದಾದರೆ ಆಗಿಲ್ಲ. ಇವತ್ತು ರೈತರುಗಳಿಗೆ ಅನುಕೂಲವಾಗಿದ್ದರೆ ಆಂದೋಳನ ಗಲಾಟೆಗಳು ಆಗುತ್ತಿರಲಿಲ್ಲ. ಮುಂದೆ ಇಂತಿಂಥ ಕೆಲಸಗಳನ್ನು ಮಾಡುತ್ತೇವೆಂದು ಸ್ಪಷ್ಟವಾಗಿ ಭರವಸೆ, ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಎಷ್ಟೆಷ್ಟು ಮಾಡಬೇಕೋ ಆಷ್ಟು ಮಾಡಿ ಕೊಟ್ಟಿದ್ದೇವೆ. ರೈತರು ತೃಪ್ತರಾಗಿಯೇ ಇದ್ದಾರೆ. ಆಂದೋಳನ ಏನೂ ಆಗಿಲ್ಲ. ಕೆಲವರು ಆಂದೋನ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಆದು ಆಗಿಲ್ಲ.

ಶ್ರೀ ಪಂಪಾಪತಿ.—ಪತ್ರಿಕೆಗಳಲ್ಲಿ ಮತ್ತು ಸಿನಿಮಾಗಳಲ್ಲಿ ಪ್ರಕಟಣೆ ಮಾಡಿದ್ದೀರಿ ಜಾರಿಗೆ ತಂದಿಲ್ಲ.

ಶ್ರೀ ಆರ್. ಗುಂಡೂರಾವ್.—ಅದು ನಿಮ್ಮ ಪಾರ್ಟಿ ಸದಸ್ಯರ ಅಭಿಪ್ರಾಯ.